ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧೀಕ್ಷಕ ಅಭಿಯಂತರರು ರವರ ಕಛೇರಿ, ಮಹದೇವಪುರ ವಲಯ, ಕೆ.ಆರ್.ಪುರ ಬೆಂಗಳೂರು-36.

ಸಂಖ್ಯೆ:ಬಿ.ಬಿ.ಎಂ.ಪಿ/ಅ.ಅ/ಮ.ವ/ಪಿ.ಆರ್/ 57/14-15 ದಿನಾಂಕ: 30/12/2014

"ಸರಬರಾಜು ಆದೇಶ"

ರವರಿಗೆ,

ಶ್ರೀ. ಬಿ.ಆರ್.ಶಂಕರ್ ರೆಡ್ಡಿ
ಬಳಗೆರೆ, ಪಣತ್ತೂರು ಪೋಸ್ಟ್,
ಬೆಂಗಳೂರು ಪೂರ್ವ. ಬೆಂಗಳೂರು
ಮೊ: 9343770652

ವಿಷಯ:- ವಾರ್ಡ ಸಂಖ್ಯೆ 87, ಹೆಚ್.ಎ.ಎಲ್.ಏರ್‌ಪೋರ್ಟ್ ಕ್ಕೆ ಘನತ್ಯಾಜ್ಯ ವಸ್ತು ನಿರ್ವಹಣೆ ಮತ್ತು ವಿಲೇವಾರಿ ಕಾರ್ಯಕ್ಕೆ ಗುತ್ತಿಗೆ ಪೌರಕಾರ್ಮಿಕರನ್ನು ಹಾಗೂ ಗುತ್ತಿಗೆ ವಾಹನಗಳನ್ನು ಸರಬರಾಜು ಮಾಡುವ ಬಗ್ಗೆ.

ಉಲ್ಲೇಖ:- ಮಾನ್ಯ ಆಯುಕ್ತರವರ ಅನುಮೋದನೆಯ ಟಿಪ್ಪಣಿ ಹಾಳೆಯ ಕಂಡಿಕೆ ಸಂಖ್ಯೆ: (49) ದಿನಾಂಕ: 10/12/2014.

--*-*

ವಾರ್ಡ್ ಸಂಖ್ಯೆ:87, ಹೆಚ್.ಎ.ಎಲ್.ಏರ್‌ಪೋರ್ಟ್ ಕ್ಕೆ ಘನತ್ಯಾಜ್ಯ ವಸ್ತು ನಿರ್ವಹಣೆ ಮತ್ತು ವಿಲೇವಾರಿಗಾಗಿ ಗುತ್ತಿಗೆ ಪೌರಕಾರ್ಮಿಕರನ್ನು ಹಾಗೂ ಗುತ್ತಿಗೆ ವಾಹನಗಳನ್ನು ಸರಬರಾಜು ಮಾಡುವ ಕಾರ್ಯಕ್ಕೆ ಮೇಲ್ಕಂಡ ಕಾಮಗಾರಿಯ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯಾಗಿರುವಂತೆ ಪ್ರತಿ ಮಾಹೆಯ ಒಟ್ಟು ಮೊತ್ತ, ಪೌರಕಾರ್ಮಿಕರು ಹಾಗೂ ವಾಹನಗಳು ಈ ಕೆಳಕಂಡಂತಿರುತ್ತದೆ.

Sl. No	Pourakarmika with all accessories	Auto tipper with 1 helper	Compactors with 1 helper	Tipper lorry with 4 helper	Supervisors	Total Amount in Rs.per month
1	67	10	1	1	3	1195503.00

ಸದರಿ ಘನತ್ಯಾಜ್ಯ ನಿರ್ವಹಣೆ ಹಾಗೂ ವಿಲೇವಾರಿ ಕಾಮಗಾರಿಯನ್ನು ಪರಿಸರ ಅಭಿಯಂತರರು, ಹೆಚ್.ಎ.ಎಲ್ ಏರ್‌ಪೋರ್ಟ್ ಉಪವಿಭಾಗ ರವರ ಸೂಚನೆಗಳಂತೆ ಎಲ್ಲಾ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ದಿನಾಂಕ: 01/01/2015 ರಿಂದ ಅನ್ವಯಿಸುವಂತೆ ಪ್ರಾರಂಭಿಸಿ, ಮುಂದಿನ ಆದೇಶದವರೆಗೆ ಕಾರ್ಯನಿರ್ವಹಿಸಲು/ಸರಬರಾಜು ಮಾಡಲು ಸೂಚಿಸಿದೆ.

ಷರತ್ತುಗಳು:-

1. ಸರಬರಾಜು ಆದೇಶ ತಲುಪಿದ ಒಂದು ವಾರದೊಳಗಾಗಿ ಕಾರ್ಮಿಕರ ಪರವಾನಗಿ ಮತ್ತು ಇ.ಎಸ್.ಐ, ಪಿ.ಎಫ್ ಹಾಗೂ ವಾಹನಗಳ ನೊಂದಾಯಿತ ದಾಖಲಾತಿಗಳನ್ನು ಕಛೇರಿಗೆ ಸಲ್ಲಿಸುವುದು ಹಾಗೂ ಪ್ರತಿ ಮಾಹೆ ಇ.ಎಸ್.ಐ ಮತ್ತು ಪಿ.ಎಫ್ ಪಾವತಿಸಿ ದಾಖಲಾತಿ ಒದಗಿಸುವುದು.
2. ಸರಬರಾಜುಗೊಳಿಸಿ, ನಿಯೋಜಿಸಿರುವ ಪೌರಕಾರ್ಮಿಕರಿಗೆ ಅಗತ್ಯವಿರುವ ಸಲಕರಣೆಗಳನ್ನು ಒದಗಿಸುವುದು.
3. ವಾಹನ ಚಾಲಕರು ಬಾರಿ ವಾಹನ ಚಾಲನೆಯ ಪರವಾನಗಿ ಕಡ್ಡಾಯವಾಗಿ ಹೊಂದಿರತಕ್ಕದ್ದು.
4. ಸರಬರಾಜು ಮಾಡಿ ನಿಯೋಜಿಸಿರುವ ಪೌರಕಾರ್ಮಿಕರನ್ನು ಯಾವುದೇ ಕಾರಣಕ್ಕೂ ಬಿ.ಬಿ.ಎಂ.ಪಿ ಖಾಯಂ ನೌಕರರೆಂದು ಪರಿಗಣಿಸತಕ್ಕದಲ್ಲ.

5. ಸರಬರಾಜು ಮಾಡಿ ನಿಯೋಜಿಸಿರುವ ವಾಹನಗಳು ಉತ್ತಮ ಸ್ಥಿತಿಯಲ್ಲಿರಬೇಕು ಹಾಗೂ ಎಲ್ಲಾ ದಾಖಲಾತಿಗಳೊಂದಿಗೆ, ಆರ್.ಟಿ.ಓ ನಿಯಮಗಳಿಗೆ ಬದ್ಧವಾಗಿದ್ದು, ಇದರ ನಿರ್ವಹಣೆಯ ಜವಾಬ್ದಾರಿ ನಿಮ್ಮದೇ ಆಗಿರುತ್ತದೆ.
6. ಘನತ್ಯಾಜ್ಯ ಮೂಲದಲ್ಲೇ, ಹಸಿಕಸ ಮತ್ತು ಒಣಕಸವನ್ನು ಬೇರ್ಪಡಿಸಿ, ವಿಲೇವಾರಿ ಮಾಡತಕ್ಕದ್ದು.
7. ಒಣತ್ಯಾಜ್ಯವನ್ನು ಒಣತ್ಯಾಜ್ಯ ಘಟಕಕ್ಕೆ ಖಡ್ಡಾಯವಾಗಿ ನೀಡತಕ್ಕದ್ದು.
8. ಸದರಿ ವಾರ್ಡ್‌ನ ಪರಿಸರ ಅಭಿಯಂತರರು/ ಆರೋಗ್ಯ ನಿರೀಕ್ಷಕರು ನೀಡುವ ನಿರ್ದೇಶನಗಳಂತೆ ಕಾರ್ಯನಿರ್ವಹಿಸುವುದು.
9. ಮಾನ್ಯ ಆಯುಕ್ತರ ಸೂಚನೆಯಂತೆ ಟಿಪ್ಪರ್ ಲಾರಿಗಳ ಬದಲಾಗಿ ಕಾಂಪ್ಯಾಕ್ಟರ್ ಉಪಯೋಗಿಸಲು ಕ್ರಮ ವಹಿಸುವುದು.

30/12

ಅಧೀಕ್ಷಕ ಅಭಿಯಂತರರು
ಬಿ.ಬಿ.ಎಂ.ಪಿ. ಮಹದೇವಪುರ ವಲಯ

ಪ್ರತಿಯನ್ನು:-

1. ಮಾನ್ಯ ಜಂಟಿ ಆಯುಕ್ತರು, ಮಹದೇವಪುರ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಸಹಾಯಕ ನಿಯಂತ್ರಕರು(ಹಣಕಾಸು), ಮಹದೇವಪುರ ವಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಉಪ ಪರಿಸರ ಅಧಿಕಾರಿಗಳು (ಕೆ.ಆರ್.ಪುರ ವಿಭಾಗ) ರವರ ಸೂಕ್ತ ಕ್ರಮಕ್ಕಾಗಿ.
4. ಪರಿಸರ ಅಭಿಯಂತರರು (ಹೆಚ್.ಎ.ಎಲ್ ಏರ್‌ಪೋರ್ಟ್ ಉಪವಿಭಾಗ) ರವರ ಸೂಕ್ತ ಕ್ರಮಕ್ಕಾಗಿ.
5. ಕಛೇರಿ ಕಡತಕ್ಕೆ.